ಶ್ರಿ ಕೆ.ಬಿ.ಮಲ್ಲಿಕಾರ್ಜುನ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಬೀರೂರು ಕ್ಷೇತ್ರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಇಲ್ಲ. ಈಗ ದಾವಣಗೆರೆಯಲ್ಲಿ ಇಲ್ಲ, ಉಡುಪಿಯಲ್ಲಿ ಇಲ್ಲವೆಂದು ಹೇಳಿದರು. ಇದೇ ರೀತಿಯಲ್ಲಿ ನನ್ನ ಕ್ಷೇತ್ರದಲ್ಲೂ ಇಲ್ಲ. ಆದುದರಿಂದ ತಾವು ಇದನ್ನು ಗಮನಿಸಿ ನನ್ನ ಕ್ಷೇತ್ರಕ್ಕೂ ಕನ್ಸಿಡರ್ ಮಾಡಬೇಕೆಂದು ಕೇಳುತ್ತೇನೆ. ತಾವು ಇದನ್ನು ಪರಿಶೀಲನೆ ಮಾಡಿ, ಎಂದು ಮನವಿ ಮಾಡಿಕೊಳ್ಳುತ್ತೇನೆ.

ಡಾ: ಜಿ.ಪರಮೇಶ್ವರ್: ಮಾನ್ಯ ಅಧ್ಯಕ್ಷರೇ, ನಾವು ಕ್ಷೇತ್ರಾವಾರು ಹೋಗುವುದಕ್ಕಿಂತ ಅಲ್ಲಿ ಜ್ಯೂನಿಯರ್ ಕಾಲೇಜುಗಳು ಎಷ್ಟಿವೆ, ಎನ್ನುವುದು ಫೀಡರ್ ಕಾಲೇಜುಗಳು ಎಷ್ಟಿವೆ ಎನ್ನುವುದು ಮುಖ್ಯ. ಆ ಕಾಲೇಜುಗಳು ಪ್ರಾರಂಭ ಮಾಡಿದರೆ ವಿದ್ಯಾರ್ಥಿಗಳು ಬೇಕಾಗುತ್ತದೆ, ಕ್ಷೇತ್ರ ವಿಂಗಡನೆಯಾಗುವಾಗ ಬೇರೆ ಬೇರೆ ರೀತಿಯಾಗಬಹುದು. ಈಗ ೨೨ ಕಿ.ಮಿ. ಗಳಲ್ಲಿ ಎರಡು ಪ್ರಥಮ ಕಾಲೇಜುಗಳು ದೊಡ್ಡದು ಇವೆ. ಆ ಕಾರಣಕ್ಕಾಗಿ ನಾನು ಹೇಳಿದ್ದೇನೆ.

ಉಡುಪಿ ಜಿಲ್ಲಾ ಪಂಚಾಯತ್ ಕಛೇರಿ ಕಟ್ಟಡ.

೧೬೪(೧೭೭೭)

ಶ್ರೀ ಯು.ಆರ್.ಸಭಾಪತಿ(ಉಡುಪಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಉಡುಪಿ ಜಿಲ್ಲಾ ಪಂಚಾಯತ್ ಕಛೇರಿ ಕಟ್ಟಡಕ್ಕೆ ''ಶಂಕು ಸ್ಥಾಪನೆ'' ಮಾಡಲಾಗಿದೆಯೆ; ಮಾಡಲಾಗಿದ್ದರೆ ಎಂದು ಮಾಡಲಾಯಿತು?

೨. ಈವರೆಗೆ ಕಟ್ಟಡವನ್ನು ನಿರ್ಮಾಣ ಮಾಡುವಲ್ಲಿ ಆಗಿರುವ ವಿಳಂಬಕ್ಕೆ ಕಾರಣಗಳೇನು?

ಶ್ರೀ ಎಂ.ವೈ.ಘೋರ್ಪಡೆ: (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

೧. ದಿನಾಂಕ: ೧೪.೫.೧೯೯೯ರಂದು ಶಂಕು ಸ್ಥಾಪನೆ ನೆರವೇರಿಸಲಾಗಿರುತ್ತದೆ.

೨. ಕಟ್ಟಡ ನಿರ್ಮಿಸಬೇಕಾದ ಜಾಗದ ಬಗ್ಗೆ ವಿವಾದವಿರುವುದರಿಂದ ಕೆಲಸ ಪ್ರಾರಂಭಿಸುವಲ್ಲಿ ವಿಳಂಬವಾಗಿದೆ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, ನಮ್ಮ ಉಡುಪಿ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್ ಕಛೇರಿ ಕಟ್ಟಡಕ್ಕೆ ದಿನಾಂಕ ೧೪.೫.೧೯೯೯ರಂದು ಶಂಕುಸ್ಥಾಪನೆಯನ್ನು ಮಾಡಲಾಗಿದೆ. ಆದರೆ ಇದುವರೆಗೂ ಕಟ್ಟಡವನ್ನು ಏಕೆ ಕಟ್ಟಿಲ್ಲವೆನ್ನುವುದಕ್ಕೆ ವಿವಾದವಿದೆ, ಎನ್ನುವ ಉತ್ತರವನ್ನು ಸರ್ಕಾರದವರು ಕೊಟ್ಟಿದ್ದಾರೆ. ಈ ವಿವಾದ ಒಂದು ಸ್ವಯಂ ನಿರ್ಮಿತವಾದಂತಹ ವಿವಾದವಾಗಿದೆ. ಇದರಲ್ಲಿ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು ಮನಸ್ಸು ಮಾಡಿದರೆ ಈ ಸ್ವಯಂನಿರ್ಮಿತವಾದ ವಿವಾದವನ್ನು ಕೊನೆಗೊಳಿಸಿ ಕಟ್ಟಡವನ್ನು ಕಟ್ಟಿ ಮುಗಿಸಬಹುದು. ಆದರೆ ಇವರು ಅನಾವಶ್ಯಕವಾಗಿ ವಿವಾದವಿದೆ ಎಂದು ಹೇಳಿ, ಅವರ ಜವಾಬ್ದಾರಿಯನ್ನು ಹೊಣೆಗಾರಿಕೆಯನ್ನು ಬಿಟ್ಟು ಅವರಿಷ್ಟಕ್ಕೆ ಇದ್ದರೆ ಆಗುವುದಿಲ್ಲ. ಇವರು ಸಂಬಂಧಪಟ್ಟವರನ್ನು ಕರೆಸಿ, ಇದನ್ನು ಇತ್ಯರ್ಥ ಮಾಡಿದ್ದರೆ ಈ ಕಟ್ಟಡದ ಕೆಲಸವೂ ಮುಗಿಯುತ್ತಿತ್ತು ಮತ್ತೆ ಇದಕ್ಕಾಗಿ ಮೂವತ್ತು ಲಕ್ಷ ರೂಪಾಯಿಗಳು ಇದೆ. ಆದುದರಿಂದ ದಯಮಾಡಿ ಕೂಡಲೇ ಜಿಲ್ಲಾಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಯವರಿಗೆ ನಿರ್ದೇಶನವನ್ನು ಕೊಟ್ಟು ಇದರಲ್ಲಿ ಇರುವಂತಹ ಸಮಸ್ಯೆಯನ್ನು ಕೂಡಲೇ ಇತ್ಯರ್ಥಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಈಗ ನನ್ನ ಬಳಿ ಇರುವ ಮಾಹಿತಿಯ ಪ್ರಕಾರ ಈ ಕಟ್ಟಡದ ''ಶಂಕು ಸ್ಥಾಪನೆ'' ದಿನಾಂಕ: ೧೪.೫.೧೯೯೯ರಂದು ಮಾಡಲಾಗಿದೆ. ಅದಕ್ಕೆ ಹಣ ಮೂವತ್ತು ಲಕ್ಷ ರೂಪಾಯಿ ಇದೆ. ಆದರೆ ಇಲ್ಲಿ ಜಾಗದ ಬಗ್ಗೆ ಸ್ವಲ್ಪ ವಿವಾದವಿರುವುದರಿಂದ ಕೆಲಸ ಪ್ರಾರಂಭವಾಗಿಲ್ಲ. ಇದು ಮೂಡನಿಡಂಬೂರು ವಿಲೇಜ್ ೭೨ ಸೆಂಟ್ಸ್ ಸರ್ವೆ ನಂ.೫೭, ಇಲ್ಲಿ ದಲಿತರು ಜಾಗವನ್ನು ಕೊಡುವುದಕ್ಕೆ ವಿರೋಧ ಮಾಡಿದ್ದಾರೆಂದು ವರದಿ ಇದೆ. ಈ ಕೆಲಸಕ್ಕೆ ಎರಡು ವರ್ಷಗಳಾಗಬಾರದು, ಇಲ್ಲಿನ ಜಿಲ್ಲಾಧಿಕಾರಿಗಳು ಹಾಗೂ ಸಿ.ಓ. ಕುಳಿತು ಇತ್ಯರ್ಥ ಮಾಡಿದರೆ ಇದಕ್ಕೆ ಪರಿಹಾರ ಕಾಣುವುದಕ್ಕೆ ಸಾಧ್ಯವಿದೆ. ಈ ಜಾಗದಲ್ಲಿ ಕಟ್ಟಡ ಮಾಡುವುದಕ್ಕೆ ಆಗದೇ ಹೋದರೆ ಬೇರೆ ಜಾಗವನ್ನು ನೋಡಿ. ಈ ಕೆಲಸ ಜಿಲ್ಲಾ ಮಟ್ಟದಲ್ಲಿ ಆಗಬೇಕಾದಂಥಾದ್ದು ಇದಕ್ಕೆ ಸರ್ಕಾರದವರು ಎಸ್ಟಿಮೇಟ್, ಪ್ಲಾನ್, ಮಾಡಿಲ್ಲ ಮತ್ತೆ ಇದರ ವೆಚ್ಚ ೩೦ ಲಕ್ಷ ರೂಪಾಯಿಗಳು ಕಡಿಮೆ ವೆಚ್ಚವಿರುವುದರಿಂದ ತಾವು ನಮ್ಮ ಅನುಮತಿಯನ್ನು ಕೇಳುವ ಹಾಗೆ ಇಲ್ಲ. ಇಲ್ಲಿ ಜಾಗದ ಬಗ್ಗೆ ಅವರೇ ಕುಳಿತು ಇತ್ಯರ್ಥ ಮಾಡಿಕೊಳ್ಳುವ ಸಾಧ್ಯತೆಗಳು ಇತ್ತು. ಈಗ ಸರ್ಕಾರದ ವತಿಯಿಂದ ಜಿಲ್ಲಾಧಿಕಾರಿಯವರಿಗೆ ಮತ್ತು ಸಿ.ಓರವರಿಗೂ ಇದನ್ನು ಇತ್ಯರ್ಥ ಮಾಡಿ ಎಂದು ಹೇಳುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಜಿಲ್ಲಾಧಿಕಾರಿಯವರನ್ನು ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರಿಗೆ ಈ ಬಗ್ಗೆ ಹೇಳಿದ್ದೇವೆ. ಇದರ ಬಗ್ಗೆ ಇದು ಪರಿಶಿಷ್ಟ ವರ್ಗಕ್ಕೆ ಸೀಮಿತವಾಗಿರುವಂತಹ ಜಾಗವೆಂದು ಹೇಳಿಕೊಂಡು ಬಂದಿದ್ದಾರೆ. ಇಲ್ಲಿ ಪರಿಶಿಷ್ಟ ವರ್ಗದವರಿಗೆ ೭೨ ಸೆಂಟ್ಸ್ ಜಾಗವಲ್ಲದೇ, ಶಾಲೆಗೆ ಎಂದು ಪ್ರತ್ಯೇಕವಾಗಿ ಬೇರೆ ಇದೆ. ಅದನ್ನು ಇಟ್ಟುಕೊಂಡು ಈ ಜಾಗದ ಬಗ್ಗೆ ಎಲ್ಲರೂ ರಿಕ್ವೆಸ್ಟ್ ಮಾಡಿಕೊಂಡರೂ ಆಗುತ್ತಿಲ್ಲ, ಇದರ ಬಗ್ಗೆ ಹೊಂದಾಣಿಕೆ ಮಾಡದೇ ಹೋದರೆ ಆಗುವುದಿಲ್ಲ. ಆದುದರಿಂದ ತಾವು ಜಿಲ್ಲಾಧಿಕಾರಿಯವರಿಗೆ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರಿಗೆ ತಾವು ನಿರ್ದೇಶನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕ್ಷಯರೋಗ ಆಸ್ಪತ್ರೆಗಳಲ್ಲಿ ಔಷಧಿ ಕೊರತೆ.

೧೬೫(೧೭೭೫)

ಶ್ರೀ ಸುಬ್ಬಾರೆಡ್ಡಿ ಕೆ.ಎನ್.(ಬಸವನಗುಡಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕ್ಷಯರೋಗ ಆಸ್ಪತ್ರೆಗಳಲ್ಲಿ ಔಷಧಿ ದೊರೆಯದೆ ರೋಗಿಗಳು ಬವಣೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಾದಲ್ಲಿ ಕ್ಷಯ ರೋಗಿಗಳಿಗೆ ಔಷಧಿ ದೊರೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ: ಎ.ಬಿ. ಮಾಲಕ ರೆಡ್ಡಿ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿರುವುದಿಲ್ಲ.

ಆ) ರಾಜ್ಯದಲ್ಲಿರುವ ಸ್ಯಾನಿಟೋರಿಯಂ ಆಸ್ಪತ್ರೆಗಳಲ್ಲಿ ಔಷಧಿಗಳ ದಾಸ್ತಾನು ಸಮರ್ಪಕವಾಗಿದೆ. ಈ ಆಸ್ಪತ್ರೆಗಳಿಗೆ ಶೇಕಡ ೪೦ ರಷ್ಟು ಸರ್ಕಾರಿ ಔಷಧ ಮಳಿಗೆಯಿಂದಲೂ, ಶೇಕಡ ೬೦ ರಷ್ಟು ಆಸ್ಪತ್ರೆಯ ಅನುದಾನದಿಂದಲೂ ಸರಬರಾಜು ಮಾಡುತ್ತಿದೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಕ್ಷಯರೋಗ ಆಸ್ಪತ್ರೆಗಳು ಎಷ್ಟು ಇವೆ? ಮತ್ತೆ ಶೇ.೬೦ರಷ್ಟು ಆಸ್ಪತ್ರೆಗಳಿಗೆ ಅನುದಾನ ತಡೆಯಾಗಿ